ಹತ್ತಿರ ಹೋಗಿ ಬರ್ತೀನಿ ಎಂದು ಹೇಳುತ್ತಾ ರಾಜೀವ ಸ್ಟೇಷನ್ನಿನಿಂದ ಹೊರಹೋದ.

ಮಾರ್ಚರಿ ಬಳಿ ನಿನ್ನೆಗಿಂತ ಹೆಚ್ಚು ಜನ ಇದ್ದರು. ವಾಚ್‌ಮನ್ ಹತ್ತಿರ ಹೋಗಿ, 'ನಿನ್ನೆ ಬೆಳಗಿನ ಜಾವ ಸುಹಾಸ್ ರಾನಡೆ ಅನ್ನೋರ ಬಾಡಿಯನ್ನು ಒಳಗೆ ಇಟ್ಟಿದ್ವಿ. ಅದನ್ನು ತಗಂಡು ಹೋಗೋಕೆ ಇನ್ನೂ ಯಾರೂ ಬಂದಿಲ್ಲ. ಇಲ್ಲಿ ಹೆಗ್ಗಣಗಳ ಕಾಟ ಅಂತ ಗೊತ್ತಾಯ್ತು. ಬಾಡಿಗೆ ಏನಾದರೂ ಡ್ಯಾಮೇಜ್ ಆಗಿರಬಹುದು. ಸ್ವಲ್ಪ ನೋಡಿ ಹೇಳೋಕಾಗುತ್ತಾ' ಎಂದು ವಿನಂತಿ ಮಾಡಿಕೊಂಡ. 'ಸಾರ್, ನೀವು ಯಾವ ಕಾಲದಲ್ಲಿದ್ದೀರಿ?. ಈ ಮಾರ್ಚರಿಯಲ್ಲಿ ಇಲಿ, ಹೆಗ್ಗಣಗಳ ಕಾಟ ಇಲ್ಲ. ಬಾಡಿಗಳನ್ನು ಬಾಕ್ಸ್‌ನಲ್ಲಿಟ್ಟು ಕೋಲ್ಡ್ ಸ್ಟೋರೇಜ್ನಲ್ಲಿ ಇಟ್ಟಿದ್ದೀವಿ...' ಎಂದು ಅವನು ಹೇಳಿದ್ದನ್ನು ಕೇಳಿ ರಾಜೀವನಿಗೆ ಸಮಾಧಾನವಾಯಿತು.

ಎರಡು ಗಂಟೆಗೆ ಭಂಡಾರಿ ಬಂದರು. ಬರುತ್ತಲೇ 'ಬಾರಯ್ಯಾ ರಾಜೀವ, ನಿನಗೆ ಕೆಲವು ವಿಷಯ ಹೇಳಬೇಕು' ಎನ್ನುತ್ತಾ ಅವನನ್ನು ಚೇಂಬರಿನೊಳಕ್ಕೆ ಕರೆದುಕೊಂಡು ಹೋದರು.

'ಸುಹಾಸನ ವಾರಸುದಾರರು ಯಾರು ಅನ್ನೋದನ್ನ ಪತ್ತೆ ಮಾಡೋದು ಕಷ್ಟ ಆಗ್ತಿದೆ. ನಿನ್ನೆ ರಾತ್ರಿ ರಾಯಭಾಗ ಪೊಲೀಸರಿಗೆ ಫೋನ್ ಮಾಡಿದ್ನಲ್ಲ, ಇವತ್ತು ಬೆಳಗ್ಗೆ ಸುಹಾಸನ ಬಗ್ಗೆ ಕೆಲವು ವಿಷಯ ತಿಳಿಸಿದರು. ಸುಹಾಸ್, ಮಾಧವರಾವ್ ರಾನಡೆ ಅನ್ನೋರ ಮೊದಲ ಹೆಂಡ್ತಿಯ ಮಗನಂತೆ. ಅವರಿಗೆ ಅರವತ್ತೆಪ್ಪತ್ತು ಎಕರೆ ಜಮೀನಿದೆ. ಐದಾರು ಜನ ಅದನ್ನು ಕಬ್ಜ ಮಾಡಿಕೊಂಡು ಸಾಗುವಳಿ ಮಾಡ್ತಿದ್ದಾರೆ! ಈ ಭೂಮಿಯಲ್ಲಿ ನಂಗೆ ಪಾಲು ಬರಬೇಕು ಅಂತ ಒಬ್ಬಳು ಕೋರ್ಟಿಗೂ ಹೋಗಿದ್ದಾಳಂತೆ. ಅವಳು ಹದಿನೈದಿಪ್ಪತ್ತು ದಿನಗಳ ಹಿಂದೆ ಬೆಳಗಾವಿ ಆಸ್ಪತ್ರೆಯಲ್ಲಿ ಸತ್ತಳು ಅಂತ ಗೊತ್ತಾಗಿದೆ. ಅವಳ ಬಗ್ಗೆ ರಾಯಭಾಗ ಪೊಲೀಸರಿಗೆ ಸರಿಯಾದ ಮಾಹಿತಿ ಇಲ್ಲ. ಬಾಡಿ ಕೊಡಿ ಅಂತ ಬಂದಿರೋರು ಸುಹಾಸನ ಸಂಬಂಧಿಕರಲ್ಲ! ಕನ್ಫರ್ಮ್ ಮಾಡಿಕೊಳ್ಳದೆ ನಾವು ಬಾಡಿ ಕೊಡಲ್ಲ. ನಾಳೆ ಯಾರಾದರೂ ಕೋರ್ಟಿಗೆ ಹೋದರೆ ಕಷ್ಟವಾಗುತ್ತೆ. ಆಸ್ತಿ ಕೇಸು ಇತ್ಯರ್ಥ ಮಾಡುವಾಗ ಸುಹಾಸನ ಅಂತ್ಯಕ್ರಿಯೆ ಯಾರು ಮಾಡಿದರು ಎಂದು ಕೋರ್ಟು ಕೇಳಬಹುದು. ನಾವು ಉತ್ತರ ಹೇಳಬೇಕಾಗುತ್ತೆ. ಬಾಡಿ ಇನ್ನೂ ಒಂದೆರಡು ದಿನ ಮಾರ್ಚರಿಯಲ್ಲೇ ಇದ್ದರೆ ಏನೂ ಆಗಲ್ಲ' ಎಂದು ಭಂಡಾರಿ ಹೇಳಿದರು.



* * *

ರಾಜೀವ ಮನೆಗೆ ಬಂದು ಲ್ಯಾಪ್‌ಟಾಪ್ ತೆರೆದು ಮಾಧವರಾವ್ ರಾನಡೆ ಅವರ ಬಗ್ಗೆ ಏನಾದರೂ ಮಾಹಿತಿ ಸಿಕ್ಕಬಹುದೇ ಎಂದು ಹುಡುಕಲು ಆರಂಭಿಸಿದ. ಮಾಧವ ರಾನಡೆ ಅಂತ ಕೀ ಮಾಡುತ್ತಿದ್ದಂತೆ ಜಸ್ಟೀಸ್ ಮಾಧವ ರಾನಡೆ ಅವರ ವಿವರಗಳು ಲ್ಯಾಪ್‌ಟಾಪ್ ಸ್ಕ್ರೀನ್ ಮೇಲೆ ಕಾಣಿಸಿದವು!. ಲ್ಯಾಂಡ್ ಲಾರ್ಡ್ ಮಾಧವರಾವ್ ರಾನಡೆ ಆಫ್ ರಾಯಭಾಗ್ ಎಂದು ಟೈಪ್ ಮಾಡಿದ. ಆಮೇಲೆ ಮಾಧವ ರಾನಡೆ ಆಫ್ ಹಾರೂಗೇರಿ, ನಿಪ್ಪಾಣಿ, ಸಾಂಗ್ಲಿ, ಕುಡಚಿ, ಕಾಗವಾಡ ಅಂತ ನೆನಪಿಗೆ ಬಂದ ಊರುಗಳ ಹೆಸರುಗಳನ್ನೆಲ್ಲ ಟೈಪ್ ಮಾಡಿದ. ಬೇಕಾದ ಮಾಹಿತಿ ಸಿಕ್ಕಲಿಲ್ಲ. ರಾಯಭಾಗ ತಾಲ್ಲೂಕಿನ ಭೂಮಾಲೀಕರ ಲಿಸ್ಟ್‌ಗಾಗಿ ಹುಡುಕಿದ. 1922ಕ್ಕೆ ಮೊದಲು ರಾಯಭಾಗ ಯಾರ ಆಡಳಿತದಲ್ಲಿತ್ತು, ಹೆಚ್ಚು ಕಂದಾಯ ಕಟ್ಟುತ್ತಿದ್ದ ಭೂ ಮಾಲೀಕರ ಹೆಸರುಗಳು ಇತ್ಯಾದಿ ಹೆಸರಿನಲ್ಲಿ ಮಾಹಿತಿ ಹುಡುಕಲು ಯತ್ನಿಸಿದ. ಏನೂ ಪ್ರಯೋಜನ ಆಗದೆ ಲ್ಯಾಪ್‌ಟಾಪ್ ಮುಚ್ಚಿ ಸುಮ್ಮನೆ ಕೂತ. ಮಾಧವ ರಾನಡೆ ಅವರ ಊರು ಯಾವುದು ಅನ್ನೋದು ಗೊತ್ತಾದರೆ ಏನಾದರೂ ಮಾಡಬಹುದಿತ್ತು ಅನ್ನಿಸಿತು.

ಈ ಮಾಧವರಾವ್ ಯಾರು ಎಂದು ಯೋಚಿಸುತ್ತಿರುವಾಗ ಸುಹಾಸನನ್ನು ತನಗೆ ಪರಿಚಯ ಮಾಡಿಕೊಟ್ಟ ರಾಜು ಪಾಟೀಲ ನೆನಪಾಯಿತು. ಅವನನ್ನು ಕೇಳಿದರೆ ಏನಾದರೂ ಗೊತ್ತಾಗಬಹುದು ಅನ್ನಿಸಿ ಫೋನ್ ಮಾಡಿದ. ಅವನ ಫೋನ್ ಸ್ವಿಚ್ಡ್ ಆಫ್ ಆಗಿತ್ತು. ಅವನಿಗೆ ಸುಹಾಸನ ವಿಷಯ ಹೇಳಬೇಕು